VIDYAVARDHAKA LAW COLLEGE LIBRARY MYSURU



# First Semester Three Year LL.B. Examination, June 2010
## LAW OF TORTS AND CONSUMER LAW
## (Course – III)

ıtion : 3 Hours Max. Marks : 100

**Instructions :** 1. Answer all **5** questions.

2. **One** essay type and **one** short note question or problem from **each unit** have to be attempted, which is referred as part (a) and (b) in all the units.

3. Figures to the right indicate marks.

4. Answers should be written **either** in English or Kannada **completely**.

### UNIT – I

No. 1. (a) Define 'Tort' and distinguish it from crime and breach of contract. Marks : 15

(ಅ) ಅಪಕೃತ್ಯವನ್ನು ವ್ಯಾಖ್ಯಾನಿಸಿರಿ. ಮತ್ತು ಅಪಕೃತ್ಯವನ್ನು ಅಪರಾಧ ಮತ್ತು ಕರಾರು ಭಂಗದಿಂದ ವಿಂಗಡಿಸಿರಿ.

OR/ಅಥವಾ

Explain the essential conditions of Tort with decided cases.

ಅಪಕೃತ್ಯದ ಅವಶ್ಯಕ ಘಟನಾಂಶಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

(b) 'X', a banker refuses to honour customer's cheque having sufficient funds in his hands belonging to the customer. Customer intends to file a suit against the banker, will he succeed ? Marks : 5

(ಬ) 'X' ಎಂಬ ಬ್ಯಾಂಕರನು, ತನ್ನ ಗ್ರಾಹಕನ ಖಾತೆಯಲ್ಲಿ ಸಾಕಷ್ಟು ಹಣವಿದ್ದಾಗ್ಯೂ ಆ ಗ್ರಾಹಕನ ಚೆಕ್‌ನ ಮೇಲೆ ಹಣ ಪಾವತಿಸಲು ನಿರಾಕರಿಸುತ್ತಾನೆ. ಗ್ರಾಹಕನು ಬ್ಯಾಂಕರನ ಮೇಲೆ ದಾವೆ ಹೂಡಲು ಇಚ್ಛಿಸಿದ್ದಾನೆ. ಅವನು ಗೆಲ್ಲುವನೇ ?

OR/ಅಥವಾ

P.T.O.

'A', a barber was running a Saloon. 'B', a wealthy person was one of his customers. 'A' and 'B' quarrelled for some reason. 'B', with a malicious intention, to cause loss to 'A', employed some barbers and opened a saloon just opposite to 'A's saloon and charges for less. Consequently, 'A' lost his customers and suffered heavy loss. Can 'A' recover damages from 'B' ?

'ಎ' ಎಂಬ ಕ್ಷೌರಿಕನು ಒಂದು ಕ್ಷೌರದ ಅಂಗಡಿ ನಡೆಸುತ್ತಿದ್ದನು. 'ಬಿ' ಎಂಬ ಶ್ರೀಮಂತ ವ್ಯಕ್ತಿ ಆತನ ಗಿರಾಕಿ ಆಗಿದ್ದನು. 'ಎ' ಮತ್ತು 'ಬಿ' ರಲ್ಲಿ ಯಾವುದೋ ಕಾರಣಕ್ಕಾಗಿ ಜಗಳವಾಯಿತು. 'ಬಿ'ನು 'ಎ' ನಿಗೆ ಹಾನಿಯುಂಟು ಮಾಡಬೇಕೆಂಬ ದುರುದ್ದೇಶದಿಂದ, 'ಎ'ನ ಕ್ಷೌರದ ಅಂಗಡಿಯ ಎದುರಿಗೆ ಒಂದು ಕ್ಷೌರದ ಅಂಗಡಿ ತೆರೆದು ಕೆಲವು ಜನ ಕ್ಷೌರಿಕರನ್ನು ಕೆಲಸಕ್ಕಿಟ್ಟುಕೊಂಡನು ಮತ್ತು ಕ್ಷೌರದ ದರವನ್ನು ಕಡಿಮೆ ಮಾಡಿದನು. ತತ್ಪರಿಣಾಮವಾಗಿ, 'ಎ'ನು ತನ್ನ ಗಿರಾಕಿಗಳನ್ನು ಕಳೆದು ಕೊಂಡು, ಬಹಳ ಹಾನಿಗೀಡಾದನು. 'ಎ' ನು 'ಬಿ' ನಿಂದ ನಷ್ಟ ಪರಿಹಾರ ಪಡೆಯಬಹುದೇ ?

## UNIT – II

Q. No. 2. (a) Briefly explain the various defences available to the defendant in an action for tort. Marks 15

(ಅ) ಅಪಕೃತ್ಯ ಘಟಿಸಿದಾಗ ಪ್ರತಿವಾದಿಗೆ ಇರುವ ಹಲವಾರು ಪ್ರತಿರಕ್ಷೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

OR/ಅಥವಾ

Examine the general rule that an employer is not liable for the torts of his independent contractor ? Are there any exceptions to it ?

ಯಜಮಾನನು ಸ್ವತಂತ್ರ ಗುತ್ತಿಗೆದಾರನ ಅಪಕೃತ್ಯಗಳಿಗೆ ಬಾಧ್ಯಸ್ಥನಾಗುವುದಿಲ್ಲವೆಂಬ ಸಾಮಾನ್ಯ ನಿಯಮವನ್ನು ಪರಿಶೀಲಿಸಿ. ಅದಕ್ಕೆ ಯಾವುದಾದರೂ ಅಪವಾದಗಳು ಇವೆಯೇ ?

(b) Write a note on the liability of independent contractor. Explain. Marks 5

(ಬ) ಸ್ವತಂತ್ರ ಗುತ್ತಿಗೆದಾರನ ಬಾಧ್ಯತೆಯ ಬಗ್ಗೆ ಟಿಪ್ಪಣಿ ಬರೆಯಿರಿ. ವಿವರಿಸಿ.

OR/ಅಥವಾ

The plaintiff's and the defendant's dogs were fighting. The defendant was beating them in order to separate them, the plaintiff was looking on. The defendant accidentally hit the plaintiff in the eye causing him a severe injury. The plaintiff brings an action against the defendant can he succeed ?

ವಾದಿಯ ಮತ್ತು ಪ್ರತಿವಾದಿಯ ನಾಯಿಗಳು ಜಗಳವಾಡುವುದನ್ನು ಪ್ರತಿವಾದಿಯು ಹೊಡೆದು ಬಿಡಿಸುತ್ತಿದ್ದನು. ಮತ್ತು ವಾದಿಯು ಇದನ್ನು ನೋಡುತ್ತಿದ್ದನು. ಆಕಸ್ಮಿಕವಾಗಿ ಪ್ರತಿವಾದಿಯ ಕಲ್ಲಿನೇಟು ವಾದಿಯ ಕಣ್ಣಿಗೆ ಬಿದ್ದು ತೀವ್ರವಾಗಿ ಗಾಯಗೊಂಡನು. ವಾದಿಯ, ಪ್ರತಿವಾದಿಯ ವಿರುದ್ಧ ಕ್ರಮವನ್ನು ಜರುಗಿಸುತ್ತಾನೆ. ಆತನು ಜಯಗಳಿಸಬಹುದೇ ?

## UNIT – III

Q. No.3. (a) Explain the essential elements of 'negligence', with the help of decided cases. Marks : 15

(ಅ) 'ನಿರ್ಲಕ್ಷತೆ' ಅವಶ್ಯಕ ಘಟಕಾಂಶಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿರಿ.

OR/ಅಥವಾ

Discuss the rule of 'Strict liability' with exceptions.

'ಕಟ್ಟುನಿಟ್ಟಿನ' ಹೊಣೆಗಾರಿಕೆಯನ್ನು ಅಪವಾದಗಳೊಂದಿಗೆ ವಿವರಿಸಿರಿ.

(b) Plaintiff resided next to a Roman Catholic Church of which defendant was the priest. The Church bell kept ringing during day and night disturbing the plaintiff. Advise the plaintiff. Marks : 5

(ಬ) ಪ್ರತಿವಾದಿಯು ಪಾದ್ರಿಯಾಗಿದ್ದ ರೋಮನ್ ಕೆಥೊಲಿಕ್ ಚರ್ಚಿನ ಪಕ್ಕದಲ್ಲಿ ವಾಸವಾಗಿದ್ದನು. ಆ ಚರ್ಚಿನ ಗಂಟೆಯು ಹಗಲು-ರಾತ್ರಿ ಒಂದೇ ಸಮನೆ ಬಾರಿಸುವುದರಿಂದ ವಾದಿಗೆ ತೊಂದರೆಯಾಗುತ್ತಿದೆ. ವಾದಿಗೆ ಸಲಹೆ ನೀಡಿರಿ.

OR/ಅಥವಾ

'A' threw a lighted squib into the market house which was crowded, which fell on the shed on 'B'. 'B' threw it away in the same manner, which fell on the shed of 'C'. 'C' also threw it away in the same manner, which burst in the face of 'P' and injured him. Who is liable for the injury ?

'ಅ' ನು ಬೆಂಕಿ ಹತ್ತಿರ ಪಟಾಕಿಯನ್ನು ಕಿಕ್ಕಿರಿದ ಪೇಟೆಯಲ್ಲಿ ಬೀಸಾಡಿದನು. ಅದು 'ಬ' ನ ಚಪ್ಪರದ ಮೇಲೆ ಬಿದ್ದಿತು. 'ಬ'ನು ಆ ಪಟಾಕಿಯನ್ನು ಬೀಸಿ ಒಗೆದಾಗ 'ಕ' ನ ಚಪ್ಪರದ ಮೇಲೆ ಬಿದ್ದಿತು. 'ಕ'ನು ಸಹಿತ ಹಾಗೆಯೇ ಬೀಸಿ ಒಗೆದಾಗ 'ಪ'ನ ಮುಖಕ್ಕೆ ಬರಿದು ಸಿಡಿಯಿತು ಮತ್ತು ಅವನನ್ನು ಗಾಯಗೊಳಿಸಿತು. ಈ ಗಾಯಕ್ಕೆ ಯಾರು ಹೊಣೆಗಾರರು ?

## UNIT – IV

Q. No.4. (a) Discuss the essentials of defamation with the help of decided cases. Marks : 15

(ಅ) ನಿರ್ಧರಿತ ಪ್ರಕರಣಗಳೊಂದಿಗೆ ಮಾನಹಾಯಿಯ ಅತ್ಯಾವಶ್ಯಕ ಘಟಕಾಂಶಗಳನ್ನು ಚರ್ಚಿಸಿರಿ.

OR/ಅಥವಾ

Define assault and distinguish it from battery.

'ಹಲ್ಲೆ' ಯನ್ನು ವ್ಯಾಖ್ಯಾನಿಸಿರಿ ಮತ್ತು ಅದನ್ನು 'ಪ್ರಹಾರ' ದೊಂದಿಗೆ ವಿಂಗಡಿಸಿರಿ.

(b) Write short note on : Marks : 5

(ಬ) ಲಘು ಟಿಪ್ಪಣಿ ಬರೆಯಿರಿ:

Malicious prosecution.

'ದುರ್ಭಾವನಾ ಪೂರ್ವ ಅಭಿಯೋಜನೆ'.

OR/ಅಥವಾ

Intimidation.

ಭಯ ಹುಟ್ಟಿಸುವ ಅಪಕೃತ್ಯ.

## UNIT – V

Q. No.5. (a) Define and explain the terms "Consumer" and "Services", under the Consumer Protection Act, 1986. Marks : 15

(ಅ) ಗ್ರಾಹಕರ ಅಧಿನಿಯಮ 1986ರಲ್ಲಿಯ "ಗ್ರಾಹಕ" ಮತ್ತು "ಸೇವೆಗಳು" ಪದಗಳ ವ್ಯಾಖ್ಯಾನಿಸಿ ಮತ್ತು ವಿವರಿಸಿ.

OR/ಅಥವಾ

State the procedure to be followed by the District Consumer Forum on the receipt of a complaint.

ಜಿಲ್ಲಾ ಗ್ರಾಹಕರ ವೇದಿಗೆಯಲ್ಲಿ 'ಫಿರ್ಯಾದಿ' ದಾಖಲಾದ ಮೇಲೆ ಜರುಗಿಸುವ ಪ್ರಕ್ರಿಯೆಯಗಳನ್ನು ತಿಳಿಸಿರಿ.

(b) Write a short note on : Marks : 5

(ಬ) ಲಘು ಟಿಪ್ಪಣಿ ಬರೆಯಿರಿ:

Deficiency in service.

ಸೇವೆಯಲ್ಲಿಯ ನ್ಯೂನ್ಯತೆ.

OR/ಅಥವಾ

Complaint.

'ಫಿರ್ಯಾದಿ'.

---